

## ಕುಂಡದಲ್ಲಿ ಕಾಳುಮೆಣಸು

ಕೇರಳ, ಮಲೆನಾಡು ಭಾಗದಲ್ಲಿ ಕಾಳುಮೆಣಸನ್ನು ಮರಗಳಿಗೆ ಹಬ್ಬಿಸಿ ಕೃಷಿ ಮಾಡುವುದನ್ನು ಬಹುತೇಕರು ನೋಡಿರುತ್ತಾರೆ. ಆದರೆ ಕುಂಡದಲ್ಲಿ ಬೆಳೆಯುವ ಕಾಳುಮೆಣಸು ನೋಡಿದವರು ಕಡಿಮೆ. ಮರಕ್ಕೆ ಹತ್ತಿದ ಕಾಳುಮೆಣಸಿನ ಬಳ್ಳಿಯಲ್ಲಿ ಅಡ್ಡವಾಗಿ ಬೆಳೆಯುವ ಬಳ್ಳಿಯನ್ನು ಕತ್ತರಿಸಿ ಕುಂಡದಲ್ಲಿ ಬೆಳೆಯುವಂತೆ ಅಭಿವೃದ್ಧಿಪಡಿಸಲಾಗಿದೆ. ಇದನ್ನು 'ಬುಷ್ ಪೆಪ್ಪರ್' ಎಂದೂ ಕರೆಯಲಾಗುತ್ತದೆ.

ಇದು ಮೇಲಕ್ಕೆ ಹತ್ತದೆ ಪೊದೆಯ ರೀತಿಯಲ್ಲಿ ಬೆಳೆಯುವ ಗುಣ ಹೊಂದಿದೆ. ಕುಂಡ ಅಥವಾ ನೆಲಮಟ್ಟದಲ್ಲೇ ಇದನ್ನು ಬೆಳೆಸಬಹುದು. ಈ ವಿಧಾನದಲ್ಲಿ ಕಾಳುಮೆಣಸು ಇಳುವರಿ ಗಿಡಕ್ಕೆ ಒಂದು ಕೆ.ಜಿ. ಸಿಗುವ ಸಾಧ್ಯತೆ ಇದೆ. ಕೃಷಿ ಭೂಮಿ ಇಲ್ಲ ಎನ್ನುವವರಿಗೆ ಮನೆಯ ಉಪಯೋಗಕ್ಕೆ ಕುಂಡದಲ್ಲಿ ಈ ರೀತಿಯ ಬುಷ್ ಪೆಪ್ಪರ್ ಬೆಳೆಸಬಹುದು. ಇದು ವರ್ಷದ ಒಳಗೆ ಫಸಲು ನೀಡುತ್ತದೆ. ಮನೆಯ ತಂಪು, ಹೆಚ್ಚು ಬಿಸಿಲು ಬೀಳದ ಜಾಗದಲ್ಲಿ ಇದನ್ನು ಬೆಳೆಸಬಹುದು.

–ಅರುಣ್ ಕಿಲ್ಲೂರು

## ಪಾಳುಬಿದ್ದ ಶತಮಾನದ ಕಲಾ ಶ್ರೀಮಂತಿಕೆ

ಕಾಫಿನಾಡು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕು ಹಿಂದೆ ಜೈನರ ನೆಲೆಯಾಗಿತ್ತು. ಇದಕ್ಕೆ ಮೇಗುಂದ ಹೋಬಳಿಯಲ್ಲಿನ ಬಸದಿಗಳು, ಮಣ್ಣಿನಲ್ಲಿ ಅರೆಬರೆ ಹೂತು ಹೋಗಿರುವ ವಿಗ್ರಹಗಳು, ಕಾಡಿನಲ್ಲಿನ ಹಗೇವುಗಳು, ಗದ್ದೆಗಳಲ್ಲಿ ಸಿಗುವ ತಗ್ಗು ಬಾವಿಗಳು ಹೀಗೆ ಬಗೆದಷ್ಟು ಶಿಲಾಶಾಸನಗಳು ಸಾಕ್ಷಿಯಾಗಿವೆ. ರಾಣಿ ಕಾಳಲಾ ದೇವಿಯ ಆಡಳಿತಕ್ಕೆ ಈ ಪ್ರದೇಶ ಒಳಪಟ್ಟಿತ್ತೆಂದು, ಆಕೆಯ ಕಾಲದಲ್ಲಿ ಮೇಗುಂದದ ಕಲ್ಲುಬಸ್ತಿಯಲ್ಲಿನ ಬಸದಿಗೆ ಆಕೆ ನಡೆದುಕೊಳ್ಳುತ್ತಿದ್ದಳೆಂದು, ಗಡಿರೇಖೆಯನ್ನು ಗುರುತಿಸಲು ಆಕೆ ನೆಡಿಸಿದ ಗಡಿ ಕಲ್ಲುಗಳು ಶಿಲಾಶಾಸನಗಳು ಆಕೆಯ ಆಡಳಿತದ ಬಗ್ಗೆ ತಿಳಿಸಿ ಕೊಡುತ್ತವೆ. ಆದರೀಗ ಅವೆಲ್ಲವು ಪಾಳು ಬಿದ್ದಿದ್ದು ಇತಿಹಾಸ ಸಂಶೋಧಕರಾದ ನ. ಸುರೇಶ್ ಕಲ್ಕೆರೆ ಈ ಬಗ್ಗೆ ಸಂಶೋಧನೆ ನಡೆಸುತ್ತಿದ್ದಾರೆ. ಚರಿತ್ರೆಯ ಕಲಾ ಶ್ರೀಮಂತಿಕೆಯ ದ್ಯೋತಕ ಚಿತ್ರದಲ್ಲಿರುವಂತೆ ಕಾಣಸಿಗುತ್ತದೆ.

–ಎಸ್.ಎನ್. ಚಂದ್ರಕಲಾ, ಕೊಪ್ಪ



## ಅಂದವಿದ್ದರೂ ಅದೃಷ್ಟವಿಲ್ಲದವಳು

ಕೆಲವರಿಗೆ ಅಂದ ಕೊಡುವ ದೇವರು ಅದೃಷ್ಟ ಕೊಟ್ಟಿರುವುದಿಲ್ಲ. ಚಿತ್ರದಲ್ಲಿ ಕಾಣುತ್ತಿರುವ 'ಸ್ಟಾರ್ ಗ್ಲೋರಿ' ಹೂವಿಗೂ ಅದೃಷ್ಟವಿಲ್ಲ. ನೋಡಲು ಸುಂದರವಾಗಿರುವ ಈ ಹೂವು, ಯಾವ ಹೆಣ್ಣಿನ ಮುಡಿ, ಯಾವ ಗುಡಿಯ ದೇವರ ಪಾದದಡಿಗೂ ಸಲ್ಲುವುದಿಲ್ಲ. ಇದೇ ಕಾರಣಕ್ಕೆ ಈ ಹೂವಿಗೆ ಅದೃಷ್ಟವಿಲ್ಲ ಎನ್ನುವುದು.

ಹೂವು ಅರಳಿದಾಗಿನಿಂದ ಒಣಗುವವರೆಗೆ ಬಳ್ಳಿಯಲ್ಲೇ ಇರುತ್ತದೆ. 'ಕಾನ್ವೊಲ್ವುಲೇಸಿ' ಜಾತಿಗೆ ಸೇರಿದ ಈ ಬಳ್ಳಿಯು ಅಮೆರಿಕದ ಉಷ್ಣವಲಯದ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಭಾರತದಲ್ಲೂ ಈ ಬಳ್ಳಿಯನ್ನು ಕಾಣಬಹುದು. ಸುಮಾರು ಹದಿನೈದರಿಂದ ಇಪ್ಪತ್ತು ಅಡಿಗಳಷ್ಟು ಉದ್ದ ಬೆಳೆಯುವ ಈ ಹೂವಿನ ಬಳ್ಳಿಗೆ, ಅಕ್ಕಪಕ್ಕವಿರುವ ಚಿಕ್ಕ ಪುಟ್ಟ ಗಿಡಗಳೇ ಆಸರೆ. ಈ ಹೂವುಗಳು ಎರಡು ಇಂಚುಗಳಷ್ಟು ಉದ್ದ ಬೆಳೆದು ನಕ್ಷತ್ರ ಆಕಾರದಲ್ಲಿ ಅರಳುತ್ತವೆ. ಬಿಳಿ ಮತ್ತು ಕೆಂಪು ಬಣ್ಣದಿಂದ ಕೂಡಿರುವ ಈ ಹೂವು ಹಮ್ಮಿಂಗ್ ಬರ್ಡ್‌ಗಳನ್ನು ಹೆಚ್ಚು ಸೆಳೆಯುತ್ತವೆ. ಈ ಕಾರಣಕ್ಕೆ ಇದಕ್ಕೆ 'ಹಮ್ಮಿಂಗ್ ಬರ್ಡ್ ವೈನ್' ಎಂಬ ಹೆಸರೂ ಬಂದಿರಬಹುದು.

–ಹನುಮಂತ ಎಸ್.ಕೆ., ರಾಯಚೂರು

